# ಮೊಟ್ಟೆತ್ತಡ್ಕ: ಗೇರು ಕ್ಷೇತ್ರೋತ್ಸವ, ಗೇರು ಬೆಳೆಗಾರರ ಸಮಾವೇಶ

# ಗೇರು ಬೀಜಕ್ಕೆ ಯಾವತ್ತೂ ಬೇಡಿಕೆ ಇದೆ-ನೆಟಾಲ್ಕರ್



ಪುತ್ತೂರು: ಗೇರು ಬೀಜಕ್ಕೆ ಯಾವತ್ತೂ ಬೇಡಿಕೆ ಇದೆ. ಈ ನಮ್ಮ ದೇಶದಲ್ಲಿ ಬೇಡಿಕೆಯಷ್ಟು ಗೇರು ಉತ್ಪಾದನೆ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಗೇರು ಕೃಷಿಯತ್ತ ಜನರನ್ನು ಸೆಳೆಯುವ ಪ್ರಯತ್ನ ಆಗಬೇಕು ಎಂದು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ನೆಟಾಲ್ಲರ್ ಹೇಳಿದರು. ಮೊಟ್ಟೆತ್ತಡ್ಕ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ದ.14ರಂದು ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮಂಗಳೂರು ಇದರ ವತಿಯಿಂದ ನಡೆದರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಒಂದು ದಿನದ ಗೇರು ಕ್ಷೇತ್ರೋತ್ಸವ ಮತ್ತು ಗೇರು ಬೆಳೆಗಾರರ ಸಮಾವೇಶದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಈ ವರ್ಷದಿಂದ ಜಾರಿಗೆ ಬಂದಿದ್ದು, ಇದರಲ್ಲಿ ಗೇರು ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡಲಾಗುತ್ತದೆ. 3 ಲಕ್ಷ ಗೇರು ಸಸಿಗಳನ್ನು ತಯಾರಿಸಿ ರೈತರಿಗೆ ನೀಡುವ ಯೋಜನೆ ಇದೆ ಎಂದು ಅವರು ಹೇಳಿದರು.

**ಜನರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ನಡೆಯಬೇಕು- ಎಂ.ಜಿ.ನಾಯಕ್** : ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಪುತ್ತೂರು ಡಿಸಿಆರ್ ನಿರ್ದೇಶಕ ಎಂ.ಜಿ.ನಾಯಕ್‌ರವರು, ಜನ ಈಗ ಆರ್ಥಿಕವಾಗಿ ಲಾಭಗಳಿಸುವ ಕೃಷಿಗೆ ಒತ್ತು ಕೊಡುತ್ತಿದ್ದಾರೆ. ವೈಜ್ಞಾನಿಕ ಗೇರು ಕೃಷಿಯ ಬಗ್ಗೆ ಜನರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ನಡೆಯಬೇಕು ಎಂದರು.

ವೇದಿಕೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಪುತ್ತೂರು ಡಿಸಿಆರ್ ಹಿರಿಯ ವಿಜ್ಞಾನಿ ಮೋಹನ್, ಪ್ರಧಾನ ವಿಜ್ಞಾನಿ ಟಿ.ಎನ್. ರವಿಪ್ರಸಾದ್, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಕುಂದಾಪುರ ವಿಭಾಗೀಯ ವ್ಯವಸ್ಥಾಪಕ ಉದಯಕುಮಾರ್ ಜೋಗಿ, ಪುತ್ತೂರು ಉಪ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಬ್ರಹ್ಮಣ್ಯ ರಾವ್ ಉಪಸ್ಥಿತರಿದ್ದರು. ಕೆಸಿಡಿಸಿ ಪುತ್ತೂರು ವಿಭಾಗ ವ್ಯವಸ್ಥಾಪಕ ಕಿಶೋರ್ ಕುಮಾರ್ ಸ್ವಾಗತಿಸಿದರು. ಸಿಬ್ಬಂದಿಗಳಾದ ರವಿಪ್ರಸಾದ್ ರಾಮಕುಂಜ, ಸತ್ಯನಾರಾಯಣ ರೈ, ಶೀನಪ್ಪ ಗೌಡರವರು ಅತಿಥಿಗಳನ್ನು ಗೌರವಿಸಿದರು. ಕೆ. ಸುರೇಶ್ ಗೌಡ ವಂದಿಸಿದರು. ಡಿಸಿಆರ್ ತಾಂತ್ರಿಕ ಅಧಿಕಾರಿ ಪ್ರಕಾಶ್ ಭಟ್ ಕಾರ್ಯಕ್ರಮ ನಿರೂಪಿಸಿದರು.

## ಗೇರು ಕೃಷಿಯತ್ತ ರೈತರ ಆಸಕ್ತಿ

**ಗೇರು ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭ ಗಳಿಸಬಹುದಾದ ಬೆಳೆ ಎಂಬುದು ಜನರಿಗೆ ಮನವರಿಕೆಯಾಗಿದೆ. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ರೈತರು ರಬ್ಬರ್ ಕೃಷಿ ಬಿಟ್ಟು ಗೇರು ಕೃಷಿಯತ್ತ ಆಸಕ್ತಿ ತೋರುತ್ತಿದ್ದಾರೆ.**

**ಪ್ರಕಾಶ್ ನೆಟಾಲ್ಕರ್**, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮಂಗಳೂರು

## 2ನೇ ಕಾರ್ಯಕ್ರಮ

ಗೇರು ಅಭಿವೃದ್ಧಿ ನಿಗಮದ ವತಿಯಿಂದ ಇದು ಪುತ್ತೂರಿನಲ್ಲಿ ನಡೆಯುತ್ತಿರುವ ಎರಡನೇ ಸಮಾವೇಶ. ನಿಗಮವು 4 ಸ್ವಂತ ನರ್ಸರಿಯನ್ನು ಹೊಂದಿದ್ದು, ಇಲ್ಲಿ ಉತ್ತಮ ತಳಿಯ ಗೇರು ಗಿಡಗಳನ್ನು ತಯಾರಿಸಿ ನಿಗಮದ ಜಾಗದಲ್ಲಿ ಪ್ಲಾಂಟೇಶನ್ ಮಾಡಲಾಗುತ್ತದೆ. ಅಲ್ಲದೆ ರೈತರಿಗೂ ಗಿಡಗಳನ್ನು ಹಂಚಲಾಗುತ್ತಿದೆ ಎಂದು ಕೆಸಿಡಿಸಿ ಪುತ್ತೂರು ವಿಭಾಗ ವ್ಯವಸ್ಥಾಪಕ ಕಿಶೋರ್ ಕುಮಾರ್‌ರವರು ತಮ್ಮ ಪ್ರಾಸ್ತಾವಿಕ ಮಾತಿನಲ್ಲಿ ತಿಳಿಸಿದರು.